ಆ) ಈ ಸಂಬಂಧದಲ್ಲಿ ಮರಣ ಹೊಂದಿದ ಪ್ರಕರಣಗಳು ವರದಿಯಾಗಿವೆಯೇ ;

ಇ) ಯಾವ ಸಂಸ್ಥೆಗಳು ಕಾನೂನಿನ ಉಲ್ಲಂಘನೆ ಹಾಗೂ ನಕಲಿ ಔಷಧಗಳ ತಯಾರಿಕೆಯಲ್ಲಿ ನಿರತವಾಗಿದ್ದು ದಂಡನೆಗೊಳಗಾಗಿವೆ.

ಶ್ರೀ ಹೆಚ್. ಟಿ. ಕೃಷ್ಣಪ್ಪ(ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು).—

ಆ) ಈ ಕೆಳಕಂಡಂತೆ ಕ್ರಮ ತೆಗೆದುಕೊಳ್ಳಲಾಗಿದೆ.

೧೯೮೫-೮೬	...	೬ ಪ್ರಕರಣಗಳು
೧೯೮೬-೮೭ (೨೫-೨-೮೭ ರವರೆಗೆ)	...	೨ ಪ್ರಕರಣಗಳು

ಇ) ಇಲ್ಲ.

ಸಾಮಾನ್ಯ ನಿಯಮಗಳ ಉಲ್ಲಂಘನೆಗಾಗಿ ಈ ಕೆಳಕಂಡ ಸಂಸ್ಥೆಗಳು ದಂಡನೆಗೆ ಒಳಗಾಗಿವೆ.

೧೯೮೫-೮೬

---

೧ ಮೆ. ಶಿವಶಕ್ತಿ ಇಂಡಸ್ಟ್ರೀಸ್, ಬಿಜಾಪುರ
೨ ಮೆ. ಲಿನ್ ಕೆಮಿಕಲ್ ಇಂಡಸ್ಟ್ರೀಸ್, ಮೈಸೂರು
೩ ಮೆ. ವೆಸ್ಟ್‌ಕೋಸ್ಟ್ ಡ್ರಗ್ಸ್ ಅಂಡ್ ಫಾರ್ಮಾಸ್ಯೂಟಿಕಲ್ಸ್, ಮಂಗಳೂರು.
೪ ಮೆ. ಜಗತ್ ಫಾರ್ಮಾ ಪ್ರೈವೇಟ್ ಲಿಮಿಟೆಡ್, ಬೆಂಗಳೂರು-೪೯

೧೯೮೬-೮೭ (೨೫-೨-೮೭ರವರೆಗೆ)

---

೧ ಮೆ. ವೆಸ್ಟ್‌ಕೋಸ್ಟ್ ಡ್ರಗ್ಸ್ ಅಂಡ್ ಫಾರ್ಮಾಸ್ಯೂಟಿಕಲ್ಸ್, ಮಂಗಳೂರು.
೨ ಮೆ. ರಾಬಿನಾ ಫಾರ್ಮಾಸ್ಯೂಟಿಕಲ್ಸ್ ಹುಬ್ಬಳ್ಳಿ.

ರಾಜ್ಯದಲ್ಲಿ ಪೋಲೀಸ್ ಇಲಾಖೆಯಲ್ಲಿ ಕೆಲಸ ನಿರ್ವಹಿಸುವ ಮಹಿಳೆಯರಿಗೆ ವಸತಿ ಸೌಲಭ್ಯ ಕಲ್ಪಿಸುವ ಬಗ್ಗೆ

೩೪. ಶ್ರೀ ವೇದಾಂತ ಹೆಬ್ಬಿಗೆ (ಕೃಷ್ಣರಾಜ).—ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಆ) ರಾಜ್ಯದಲ್ಲಿ ಪೋಲೀಸ್ ಇಲಾಖೆಯ ದಳದಲ್ಲಿ ಕೆಲಸ ಮಾಡುತ್ತಿರುವ ಮಹಿಳೆಯರ ಸಂಖ್ಯೆ ಎಷ್ಟು, ಇವರಲ್ಲಿ ರಾಜ್ಯ ಪತ್ರಾಂಕಿತ ಹಾಗು ರಾಜ್ಯ ಪತ್ರಾಂಕಿತರಲ್ಲದವರ ಸಂಖ್ಯೆ ಎಷ್ಟು ?

ಆ) ಹಳ್ಳಿ ಮತ್ತು ಪಟ್ಟಣಗಳಲ್ಲಿ ಕೆಲಸ ಮಾಡುವ ಪೋಲೀಸ್ ಮಹಿಳೆಯರಿಗೆ ವಸತಿ ಸೌಕರ್ಯ ಕಲ್ಪಿಸಲಾಗಿದೆಯೇ ?

ಇ) ಪೋಲೀಸ್ ಇಲಾಖೆಯಲ್ಲಿ ಸೇರುವ ಮುನ್ನ ಈ ಮಹಿಳೆಯರಿಗೆ ತರಬೇತಿ ಕೊಡಲು ಪ್ರತ್ಯೇಕವಾದ ಪೋಲೀಸ್ ತರಬೇತಿ ಕೇಂದ್ರವಿದೆಯೆ, ಇಲ್ಲದಿದ್ದರೆ ಇದರ ಬಗ್ಗೆ ಸರ್ಕಾರದವರಂ ಯೋಚಿಸಿರುವ ಕ್ರಮವೇನು ?

ಶ್ರೀ ಬಿ. ರಾಚಯ್ಯ (ಗೃಹ ಮಂತ್ರಿಯವರು).—

ಆ) ಮಹಿಳಾ ಪೋಲೀಸರ ಒಟ್ಟು ಸಂಖ್ಯೆ ೩೩೦
ಆ) ಪತ್ರಾಂಕಿತ ಮಹಿಳೆಯರ ಸಂಖ್ಯೆ ೩
ಇ) ಪತ್ರಾಂಕಿತರಲ್ಲದ ಮಹಿಳೆಯರ ಸಂಖ್ಯೆ ೩೨೭
ಈ) ೧೫೮ ಮಹಿಳಾ ಪೋಲೀಸರಿಗೆ ವಸತಿ ಕಲ್ಪಿಸಲಾಗಿದೆ.

ಅ) ಐ. ಪಿ. ಎಸ್. ಮಹಿಳೆಯರಿಗೆ ಪ್ರತ್ಯೇಕವಾದ ಪೋಲೀಸ್ ತರಬೇತಿ ಕೇಂದ್ರವಿರುವುದಿಲ್ಲ. ಇವರುಗಳು ಪೋಲೀಸ್ ತರಬೇತಿ ಅಕಾಡೆಮಿ ಹೈದರಾಬಾದ್ ಹಾಗೂ ಪೋಲೀಸ್ ತರಬೇತಿ ಕಾಲೇಜು ಮೈಸೂರು, ಇಲ್ಲಿ ಪುರುಷ ಕೆಡೆಟ್‌ಗಳ ಜೊತೆಯಲ್ಲಿ ತರಬೇತಿಯನ್ನು ಪಡೆಯುತ್ತಾರೆ.

ಆ) ಪತ್ರಾಂಕಿತರಲ್ಲದ ಮಹಿಳೆಯರಿಗೆ ಮೈಸೂರಿನ ಪೋಲೀಸ್ ತರಬೇತಿ ಕಾಲೇಜಿನಲ್ಲಿ ಪ್ರತ್ಯೇಕವಾಗಿ ತರಬೇತಿಯನ್ನು ನೀಡಲಾಗುತ್ತಿದೆ.

ಚಿತ್ರನಗರಿ ನಿರ್ಮಾಣದ ಬಗ್ಗೆ

೬೧೯. ಶ್ರೀ ವೇದಾಂತ ಹೆಮ್ಮಿಗೆ (ಕೃಷ್ಣರಾಜ).—ಮಾನ್ಯ ಮಂಖ್ಯಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಹೆಸರುಘಟ್ಟದ ಬಳಿ '' ಚಿತ್ರನಗರಿ '' ನಿರ್ಮಾಣ ಮಾಡಲು ಸರ್ಕಾರದವರು ಯೋಜನೆಯನ್ನು ಹಾಕಿಕೊಂಡಿರುವರೆ, ಹಾಗಿದ್ದಲ್ಲಿ ಯಾವಾಗ ಪ್ರಾರಂಭಿಸಲಾಗುವುದು ?

ಆ) ಇದುವರೆವಿಗೆ ಈ ಯೋಜನೆಗಾಗಿ ಸರ್ಕಾರವು ಕೊಟ್ಟಿರುವ ಧನಸಹಾಯ ಪೆಷ್ಟು ?

ಇ) ಈ '' ಚಿತ್ರನಗರಿ '' ಯೋಜನೆಯು ಎಷ್ಟು ಕಾರ್ಯಗತವಾಗಿದೆ ?

ಶ್ರೀ ರಾಮಕೃಷ್ಣ ಹೆಗಡೆ (ಮಂಖ್ಯಿ ಮಂತ್ರಿಗಳು).—

ಅ) ಕರ್ನಾಟಕ ಚಲನಚಿತ್ರ ಕೈಗಾರಿಕಾ ಅಭಿವೃದ್ಧಿ ನಿಗಮವು ಹೆಸರು ಘಟ್ಟದಲ್ಲಿರುವ ತನ್ನ ೩೪೭ ಎಕರೆ ಭೂಮಿಯಲ್ಲಿ '' ಚಿತ್ರನಗರಿ '' ನಿರ್ಮಾಣ ಮಾಡಲು ಯೋಜನೆಯನ್ನು ಹಾಕಿಕೊಂಡಿದೆ.

ಆ) ಈ ಯೋಜನೆಯನ್ನು ಕಾರ್ಯಗತ ಗೊಳಿಸಲು ಸ್ವಲ್ಪ ಆರ್ಥಿಕ ನೆರವು ನೀಡುವಂತೆ ಮತ್ತು ಬ್ಯಾಂಕುಗಳಿಂದ ಪಡೆಯಲು ಉದ್ದೇಶಿಸಿರುವ ಸಾಲಗಳಿಗೆ ಸರ್ಕಾರವು ಗ್ಯಾರಂಟಿ ನೀಡಬೇಕೆಂದು ನಿಗಮವು ಸರ್ಕಾರವನ್ನು ಕೋರಿದೆ. ನಿಗಮದ ಬೇಡಿಕೆಯು ಸರ್ಕಾರದ ಪರಿಶೀಲನೆಯಲ್ಲಿದೆ.

ಇ) ಸರ್ಕಾರವು ಈ ಯೋಜನೆಗೆ ಯಾವ ಹಣವನ್ನೂ ಕೊಟ್ಟಿರುವುದಿಲ್ಲ.

ಈ) '' ಚಿತ್ರನಗರಿ ,, ನಿರ್ಮಿಸುವ ಉದ್ದೇಶದಿಂದ, ಕರ್ನಾಟಕ ಚಲನಚಿತ್ರ ಕೈಗಾರಿಕಾ ಅಭಿವೃದ್ಧಿ ನಿಗಮವು ಹೆಸರು ಘಟ್ಟದಲ್ಲಿರುವ ತನ್ನ ಭೂಮಿಯಲ್ಲಿ ಪ್ರೊಜೆಕ್ಟರ್ ಫ್ಯಾಕ್ಟರಿ ಹಾಗೂ ಕಲರ್ ಲ್ಯಾಬ್‌ಗಳನ್ನು ಕಟ್ಟಲು ತಳಪಾಯವನ್ನು ಹಾಕಿದೆ. ಈ ಭೂಮಿಯಲ್ಲಿ ಚಿತ್ರೀಕರಣಕ್ಕೋಸ್ಕರ ಉದ್ಯಾನವನವನ್ನು ಬೆಳಿಸಲಾಗುತ್ತಿದೆ. ಇದಲ್ಲದೆ ಹಣ್ಣು ಹಂಪಲುಗಳ ಗಿಡಗಳನ್ನು ಮತ್ತು ಹೂದೋಟವನ್ನು ಬೆಳಸಲಾಗಿದೆ.

ರಾಜ್ಯ ಪ್ರವಾಸಿ ಕೇಂದ್ರಗಳಲ್ಲಿನ ಸೌಲಭ್ಯಗಳ ಬಗ್ಗೆ

೬೧೪. ಶ್ರೀ ವೇದಾಂತ ಹೆಮ್ಮಿಗೆ (ಕೃಷ್ಣರಾಜ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದ ವಿವಿಧ ಭಾಗಗಳಲ್ಲಿ ಸರ್ಕಾರದ ಅಧೀನದಲ್ಲಿ ಎಷ್ಟು ಪ್ರವಾಸಿ ಕೇಂದ್ರಗಳಿವೆ ?

ಆ) ಈ ಪ್ರವಾಸಿ ಕೇಂದ್ರಗಳಿಗೆ ಬರುವ ಪ್ರವಾಸಿಗಳಿಗೆ ಸರ್ಕಾರದವರು ಒದಗಿಸುತ್ತಿರುವ ಸೌಲಭ್ಯಗಳೇನು ಹಾಗೂ ಹೊಸದಾಗಿ ಯಾವ ಯಾವ ಸ್ಥಳಗಳಲ್ಲಿ ಕ್ರಮ ಕೈಗೊಳ್ಳಲಾಗಿದೆ?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಗಳು).—

ಅ) (ಒಂಭತ್ತು)

ಆ) ಪ್ರವಾಸಿ ಕೇಂದ್ರಗಳಿಗೆ ಬರುವ ಪ್ರವಾಸಿಗರಿಗೆ, ಸರ್ಕಾರವು ವಸತಿ ಸೌಕರ್ಯ ಮತ್ತು ಉಪಹಾರ ಗೃಹ ಸೌಲಭ್ಯಗಳನ್ನು ಒದಗಿಸಿರುತ್ತದೆ.